ಹಂದಿಗಳಲ್ಲಿ ತೀವ್ರವಾದ ಭೇದಿ ಮತ್ತು ವಾಂತಿ ಕಾಣಿಸಿಕೊಂಡಿತು. ಆ ಪ್ರದೇಶ ಸಾರ್ಸ್ ವೈರಸ್ ಮೊದಲು ಕಾಣಿಸಿಕೊಂಡ ಜಾಗದಿಂದ 60 ಕಿಲೋಮೀಟರ್ ದೂರದಲ್ಲಿತ್ತು. ಅತಿಯಾದ ವಾಂತಿ ಮತ್ತು ಭೇದಿಯಿಂದ ಸುಮಾರು 25000 ಹಂದಿಗಳು ಸತ್ತವು. ಸ್ಥಳೀಯ ಪಶುವೈದ್ಯರಿಗೆ ಆ ಕಾಯಿಲೆಯ ಮೂಲ ಕಂಡುಹಿಡಿಯಲಾಗಲಿಲ್ಲ. ಶೀ ಝೇಂಗ್ಲಿ ಅವರಿಗೆ ಕರೆ ಹೋಯಿತು. ಝೇಂಗ್ಲಿ ಹೋಗಿ ಆ ಸ್ವೈನ್ ಅಕ್ಯೂಟ್ ಡಯೇರಿಯ ಸಿಂಡ್ರೋಮ್ (SADS) ವೈರಸ್‌ಗಳ ಪರೀಕ್ಷೆ ನಡೆಸಿದಾಗ, ಸಮೀಪದಲ್ಲಿನ ಬಾವಲಿ ಗುಹೆಯಲ್ಲಿ ದೊರಕಿದ ಕೊರೊನಾ ವೈರಸ್‌ಗಳಿಗೆ ಇರುವ ಸಾಮ್ಯತೆ ಬೆಳಕಿಗೆ ಬಂತು.



## ಅದು ಮೊದಲೇನಲ್ಲ…

ಜಗತ್ತಿನಲ್ಲಿ ಬಾವಲಿಜನ್ಯ ವೈರಸ್‌ಗಳು ಮನುಷ್ಯದೇಹವನ್ನು ಸೇರಿ ಅನಾಹುತ ಮಾಡಿರುವುದು ಅದೇ ಮೊದಲ ಸಲವೇನಲ್ಲ. ಕಳೆದ 26 ವರ್ಷಗಳಲ್ಲಿ ಇಂಥ ಆರು ವೈರಸ್‌ಗಳು ಪ್ರತ್ಯಕ್ಷವಾಗಿ ಮನುಕುಲಕ್ಕೆ ಕಂಟಕ ತಂದೊಡ್ಡುವ ಮಾರಕ ಸೂಚನೆ ನೀಡಿದ್ದವು. 1994ರಲ್ಲಿ ಕಾಣಿಸಿಕೊಂಡಿದ್ದ ಹೆಂಡ್ರಾ ವೈರಸ್, 1998ರಲ್ಲಿ ಸುದ್ದಿಯಾಗಿದ್ದ ನಿಫಾ ವೈರಸ್, 2002ರಲ್ಲಿ ಅಷ್ಟಾಗಿ ಸುದ್ದಿಯಾಗದೆಯೇ ಕಾಣಿಸಿಕೊಂಡು ಮರೆಯಾಗಿದ್ದ ಮೆರ್ಸ್ (Middle East respiratory syndrome) ವೈರಸ್, 2012ರಲ್ಲಿ ವಿಶ್ವದ ಕೆಲಭಾಗಗಳನ್ನು ಕಂಗೆಡಿಸಿದ್ದ ಎಬೋಲಾ – ಈ ಎಲ್ಲವೂ ಬಾವಲಿಜನ್ಯ ವೈರಸ್‌ಗಳೇ.

ಹಾಗಾದರೆ ಬಾವಲಿಗಳು ಮನುಕುಲಕ್ಕೆ ಕಂಟಕವೇ? ಖಂಡಿತ ಅಲ್ಲ ಎನ್ನುತ್ತಾರೆ ಝೇಂಗ್ಲಿ. ‘ಬಾವಲಿಯಾಗಲಿ, ಇನ್ನಾವುದೇ ಜೀವಿಗಳಾಗಲಿ ಅವಷ್ಟಕ್ಕೆ ಅವು ಅಪಾಯಕಾರಿಯೂ ಅಲ್ಲ, ಸಮಸ್ಯೆಯ ಮೂಲವೂ ಅಲ್ಲ. ಹಾಗೆ ನೋಡಿದರೆ ಬಾವಲಿಗಳು ನಮ್ಮ ಜೀವಸರಪಣಿಗೆ ಅತ್ಯಗತ್ಯ ಜೀವಿಗಳು. ಜೀವವೈವಿಧ್ಯವನ್ನು ಅವು ಪೋಷಿಸುತ್ತವೆ. ಕೀಟಗಳನ್ನು ತಿಂದು, ವಿವಿಧ ಬಗೆಯ ಸಸ್ಯಗಳಿಗೆ ಪರಾಗಸ್ಪರ್ಶ ಮಾಡಿ ನಮ್ಮ ಪರಿಸರವ್ಯವಸ್ಥೆ ಸುಸ್ಥಿತಿಯಲ್ಲಿಡಲು ಸಹಾಯ ಮಾಡುತ್ತವೆ. ಸಮಸ್ಯೆ ಉಂಟಾಗುವುದು ನಾವು ಅವುಗಳ ಬದುಕಿನಲ್ಲಿ, ಜೀವನಕ್ರಮದಲ್ಲಿ ಹಸ್ತಕ್ಷೇಪ ಮಾಡಿದಾಗ’ ಎಂದು ಸ್ಪಷ್ಟವಾಗಿ ಹೇಳುತ್ತಾರೆ ಝೇಂಗ್ಲಿ.

## ಮುಂದಿರುವುದು ಮಹಾವಿಪತ್ತು

ಪ್ರಕೃತಿಯ ಜೀವಸರಪಳಿಯನ್ನು ಅನೈತಿಕವಾಗಿ ಕತ್ತರಿಸಿದರೆ ಏನಾಗುತ್ತದೆ ಎಂಬುದಕ್ಕೆ ಕೊರೊನಾ ವೈರಸ್ ಕಣ್ಣೆದುರಿನ ನಿದರ್ಶನವಾಗಿ ಕಾಡುತ್ತಿದೆ. ಪ್ರಪಂಚದಾದ್ಯಂತ ಹಲವು ಲಕ್ಷ ಜನರನ್ನು ವ್ಯಾಪಿಸಿ, ಸಾವಿರಾರು ಜನರನ್ನು ಬಲಿ ತೆಗೆದುಕೊಂಡಿದೆ. ಕಣ್ಣಿಗೆ ಕಾಣದ ಈ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳು ಇಡೀ ಜಗತ್ತಿನ ಬಹುತೇಕ ದೇಶಗಳು ಸ್ತಬ್ಧಗೊಳ್ಳುವಂತೆ ಮಾಡಿವೆ. ಪ್ರಪಂಚದ ಮೂಲೆ ಮೂಲೆಗಳಲ್ಲಿ ವೈದ್ಯಕೀಯ ಲೋಕ ಈ ವೈರಸ್ ವಿರುದ್ಧ ಹೋರಾಡಿ ಗೆಲ್ಲಬಲ್ಲ ಪ್ರತಿಕಾಯ ಪಡೆಯನ್ನು ಕಂಡುಹಿಡಿಯಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂದಲ್ಲಾ ನಾಳೆ ಅದರಲ್ಲಿ ಯಶಸ್ವಿಯೂ ಆಗಬಹುದು. ಆದರೆ ನಿಸರ್ಗದ ಮಾನವಸ್ತ್ರಕ್ಕೆ ಕೈ ಹಾಕಿದ ಮಾನವನ ಅಪರಾಧಕ್ಕೆ ದಂಡನೆ ಇಲ್ಲಿಗೇ ಮುಗಿಯುತ್ತದೆಯೇ?

‘ಪ್ರಸಕ್ತ ವಿಪತ್ತು ಮುಂಬರುವ ವಿಪತ್ತಿನ ಸಣ್ಣ ಎಚ್ಚರಿಕೆಯ ಗಂಟೆಯಷ್ಟೆ’ ಎನ್ನುತ್ತಾರೆ ಝೇಂಗ್ಲಿ. ಚೀನಾದಲ್ಲಿ ಈಗ ಕೊವಿಡ್–19 ಬಹುತೇಕ ನಿಯಂತ್ರಣಕ್ಕೆ ಬಂದಿದೆ. ಅಲ್ಲಿನ ದೇಶವಾಸಿಗಳ ಎದೆಯಲ್ಲಿ ನಿರಾಳತೆಯ ಉಸಿರು ಸರಾಗವಾಗಿ ಆಡಲು ಶುರುವಾಗಿದೆ. ಆದರೆ ಝೇಂಗ್ಲಿ ಅವರ ಅನುಭವಿ ಕಣ್ಣುಗಳಿಗೆ ಭವಿಷ್ಯದ ಸರಣಿ ಮಹಾವಿಪತ್ತುಗಳು ಕಾಣಿಸುತ್ತಿವೆ.

ಝೇಂಗ್ಲಿ ಅವರಿಗೀಗ 56 ವರ್ಷ ವಯಸ್ಸು. ಕಳೆದ ಹದಿನಾರು ವರ್ಷಗಳಿಂದ ನಿರಂತರವಾಗಿ ವೈರಸ್ ಶೋಧದಲ್ಲಿ ತೊಡಗಿಕೊಂಡಿರುವ ಚೀನಾದ ಈ ‘ಬಾವಲಿ ಹೆಣ್ಣು’ ಈಗ ಮುಖ್ಯವಾಹಿನಿಯಿಂದ ನಿವೃತ್ತರಾಗುವ ನಿರ್ಧಾರ ಮಾಡಿದ್ದಾರೆ. ಆದರೆ ವಿಜ್ಞಾನಿಗಳಿಗೆ ನಿವೃತ್ತಿಯ ಮಾತೆಲ್ಲಿಯದು? ‘ಸಂಶೋಧನೆಯ ಕೆಲಸ ಖಂಡಿತ ಮುಂದುವರಿಯುತ್ತದೆ’ ಎಂದವರು ದೃಢವಾಗಿ ನುಡಿಯುತ್ತಾರೆ. ಸಂಶೋಧನಾ ತಂಡಗಳ ಮಾರ್ಗದರ್ಶಿಯಾಗಿ ಝೇಂಗ್ಲಿ ಮುಂದೆಯೂ ವೈರಸ್‌ಲೋಕದ ಜೊತೆಗೆ ಒಡನಾಟ ಮುಂದುವರಿಸಲಿದ್ದಾರೆ. ಯಾಕೆಂದರೆ ತಾವು ಇಷ್ಟು ವರ್ಷಗಳ ಪರಿಶ್ರಮದಲ್ಲಿ ಕಂಡುಹಿಡಿದಿದ್ದು ಸಮುದ್ರದೊಳಗೆ ಮುಳುಗಿರುವ ಹಿಮಪರ್ವತದ ತುದಿಯನ್ನಷ್ಟೇ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ಅವರ ಪ್ರಕಾರ, ಇನ್ನೂ ಪತ್ತೆಯಾಗದ ಕನಿಷ್ಠ 5000 ಬಗೆಯ ಬಾವಲಿಜನ್ಯ ವೈರಸ್‌ಗಳು ಜಗತ್ತಿನಾದ್ಯಂತ ಇವೆ! ಆ ನಿಟ್ಟಿನಲ್ಲಿ ಎಲ್ಲ ಕಡೆಯ ಬಾವಲಿಜನ್ಯ ವೈರಸ್‌ಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸುವ ಮತ್ತು ಅಧ್ಯಯನ ಮಾಡುವ ಯೋಜನೆಯೊಂದನ್ನೂ ಝೇಂಗ್ಲಿ ರೂಪಿಸುತ್ತಿದ್ದಾರೆ.

‘ಬಾವಲಿಜನ್ಯ ಕೊರೊನಾ ವೈರಸ್‌ಗಳು ಮುಂದೆಯೂ ಸಾಕಷ್ಟು ಸಲ ಪ್ರತ್ಯಕ್ಷವಾಗಲಿವೆ’ ಎಂದು ಹೇಳುವ ಝೇಂಗ್ಲಿ ತಮ್ಮ ಮಾತಿನ ಕೊನೆಗೆ ತಣ್ಣಗಿನ ಸಾಲೊಂದನ್ನು ಸೇರಿಸುತ್ತಾರೆ. ‘ಅವುಗಳು ನಮ್ಮನ್ನು ಪತ್ತೆಹಚ್ಚುವ ಮೊದಲು ನಾವು ಅವುಗಳನ್ನು ಪತ್ತೆಹಚ್ಚಬೇಕಾಗಿದೆ’.

(ಆಧಾರ: ಸೈಂಟಿಫಿಕ್ ಅಮೆರಿಕನ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ಮತ್ತು ವಿಕಿಪಿಡಿಯಾ)

ಪ್ರತಿಕ್ರಿಯಿಸಿ: ಟೀಕೆ–ಟಿಪ್ಪಣಿಗಳಿಗೆ ಸ್ವಾಗತ.
ಇ–ಮೇಲ್: feedback@sudha.co.in


